that of Sri Sindhia's time. But, they want everything. They don't want to pay anything. ನ್ಯಾಷನಲ್ ಸೆಕ್ಟಾರ್ ಫೈಲ್ ಆಗಬೇಕಾದರೆ ಅದು ರಾಜಕೀಯ ಒತ್ತಡದ ಮೇಲೆ ಆಗುತ್ತಿರುವುದು. It should be allowed to operate on commercial basis.

SRI. R.V. DESHAPANDE : Now that the gulf was has stopped, the rates have come down, Whether the government will pressurise the Central Government to withdraw the surcharge?

SRI AZEEZ SAIT : I only hope when stability comes to the Central Government so that I can reach them, because I don't find anybody to whom I should reach.

ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಘಟಕಗಳ ಬಗ್ಗೆ

292 - ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪ್ಪ ಪೇಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎಷ್ಟು ಘಟಕಗಳಿವೆ?

ಆ) ಈ ಘಟಕಗಳನ್ನು ಯಾವ ಸ್ಥಳದಲ್ಲಿ ನಿರ್ಮಿಸಲಾಗಿದೆ?

ಇ) ನಗರದ ಯಾವ ಯಾವ ಭಾಗದಲ್ಲಿ ಎಷ್ಟು ಘಟಕಗಳನ್ನು ನಿರ್ಮಿಸಲು ಯೋಚಿಸಲಾಗಿದೆ?

ಈ) ಯಾವ ಸ್ಥಳಗಳಲ್ಲಿ ಘಟಕಗಳನ್ನು ತೆರೆಯಲಾಗುವುದು?

ಉ) ನಿವೇಶನವನ್ನು ಹಾಗೂ ಇತರ ಸಲಕರಣೆಗಳನ್ನು ಪಡೆಯುವ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) 11 ಘಟಕಗಳು

ಆ)

ಶಾಂತಿನಗರ - 3

ಟಿ. ಬ್ಲಾಕ್, ಜಯನಗರ - 1

ವಿಜಯನಗರ - 1

ಇಂದಿರಾನಗರ - 1

ಬೆಂಗಳೂರು ಬಸ್ ನಿಲ್ದಾಣ (ಸುಭಾಸ್ ನಗರ) - 1

ಯಶವಂತಪುರ - 1

ಪೀಣ್ಯ - 1

ಹೆಣ್ಣೂರು - 1

ಯಲಹಂಕ - 1

ಇ) 4 ಘಟಕಗಳು

ಈ)

1. ಜೆ.ಪಿ.ನಗರ

2. ಕೆಂಗೇರಿ

3. ಸಾಣೆಗುರುವನ ಹಳ್ಳಿ

4. ಮತ್ತೀಕೆರೆ

ಉ) ಬೆಂಗಳೂರು ಪ್ರಾಧಿಕಾರದಿಂದ ಈ ಘಟಕಗಳಿಗೆ ಬೇಕಾದ ನಿವೇಶವನ್ನು ವಶಕ್ಕೆ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರ ಬಹಳಷ್ಟು ಬೆಳೆಯುತ್ತಾ ಇದೆ. ಬೆಂಗಳೂರು ಮಹಾನಗರದಲ್ಲಿ ಎಲ್ಲಿ ನೋಡಿದರೂ ಜನಗಳು ಬಸ್‌ಗಳಿಗಾಗಿ ಕ್ಯೂನಲ್ಲಿ ನಿಂತುಕೊಂಡಿರುವುದನ್ನು ಕಾಣುತ್ತೇವೆ. ಬಿ.ಟಿ.ಎಸ್. ಬಸ್‌ಗಳಿಗಾಗಿ ಜನಗಳು ಗಂಟೆಗಟ್ಟಲೆ ಕಾಯುತ್ತಿರುವುದನ್ನು ನೋಡುತ್ತೇವೆ. ಬೆಂಗಳೂರಿನಲ್ಲಿ ಪಾರ್ಕ್‌ಮಾಡುವುದಕ್ಕೆ ಭಾಗ ಇಲ್ಲದೆ ಡಿಪೊಗಳು ಇಲ್ಲದೆ ರಾತ್ರಿ ಹೊತ್ತು ಎಲ್ಲಾ ಪೋಲೀಸ್ ಠಾಣೆಗಳ ಮುಂದೆ 30-40 ಬಸ್‌ಗಳನ್ನು ಪಾರ್ಕ್ ಮಾಡಿರುವುದನ್ನು ನೋಡುತ್ತಾ ಇರುತ್ತೇವೆ. ಪಾರ್ಕ್ ಮಾಡುವುದಕ್ಕೆ ಜಾಗ ಇಲ್ಲದೆ ಯಶವಂತಪುರದ ಬಸ್ ಬೇರೆ ಯಾವುದೋ ಒಂದು ಏರಿಯಾಗೆ ಹೋಗಿ ರೋಡ್‌ನಲ್ಲಿ ಪಾರ್ಕ್ ಮಾಡುವ ಸ್ಥಿತಿ ಆಗಿದೆ. ಆದರೆ ಮಾನ್ಯ ಮಂತ್ರಿಗಳು ನನ್ನ ಎರಡನೇ ಪ್ರಶ್ನೆಗೆ ಬೆಂಗಳೂರಿನಲ್ಲಿ 11 ಘಟಕಗಳಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ನನಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿರುವುದು ಕೇವಲ 8 ಘಟಕಗಳು ಕಡೆಯ ಮೂರು ಘಟಕಗಳಾದ ಪೀಣ್ಯ, ಹೆಣ್ಣೂರು, ಯಲಹಂಕಗಳಲ್ಲಿ ಘಟಕಗಳನ್ನು ನಿರ್ಮಾಣ ಮಾಡಲು ಜಾಗವನ್ನು ಅಕ್ವೈರಿ ಮಾಡಿದ್ದಾರೆ. ಇನ್ನೂ ಘಟಕಗಳನ್ನು ನಿರ್ಮಾಣ ಮಾಡಲಿಲ್ಲ. ನಾಲ್ಕನೇ ಪ್ರಶ್ನೆಗೆ ಜಿ.ಪಿ. ನಗರ, ಕೆಂಗೇರಿ, ಸಾಣೆಗುರುವನಹಳ್ಳಿ ಹಾಗೂ ಮತ್ತೀಕೆರೆಯಲ್ಲಿ ಘಟಕಗಳನ್ನು ತೆರೆಯಲಾಗುವುದು. ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕಾಗಿ ಇವರು ಜಾಗ ಅಕ್ವೈರ್ ಮಾಡಿಕೊಂಡಿದ್ದಾರೋ ಅಥವಾ ಇಲ್ಲವೋ ಎಂಬುದಕ್ಕೆ ಮಾನ್ಯ ಸಾರಿಗೆ ಸಚಿವರು ಉತ್ತರ ಕೊಡಬೇಕು.

SRI AZEEZ SAIT : As per the information given to me there are 11 Depots at present and I share with the fear of the hon. member. That is the reason why we have decided to split the present BTS into two divisions and attach six depots to one division and five depots to another division. At the same time we will be having 4 to 5 more depots to improve the efficciency of the BTS in Bangalore. Once it is done, I am sure, the fear which the hon. member is having will subside.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೇ, ಇನ್ನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ. ಮಾನ್ಯ ಮಂತ್ರಿಗಳು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ಪ್ರಾಧಿಕಾರದಿಂದ ಈ ಘಟಕಗಳಿಗೆ ಬೇಕಾದ ನಿದೇಶನವನ್ನು ವಶಕ್ಕೆ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಬೆಂಗಳೂರು ಪ್ರಾಧಿಕಾರದಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚು ಸಿವಿಕ್ ಎಮಿನಿಟೀಸ್ ಸೈಟ್‌ಗಳು ಇವೆ. ಆದರೆ ಬಿಟಿಎಸ್‌ನವರಾಗಲೀ ಅಥವಾ ಕೆಎಸ್‌ಆರ್‌ಟಿಸಿನವರಾಗಲಿ ಸಿವಿಕ್ ಅಮಿನಿಟೀಸ್ ಸೈಟುಗಳನ್ನು ಕೇಳುವುದಕ್ಕೆ ಬೇಗನೆ ಪ್ರೊಸೆಸ್ ಮಾಡಿದರೆ ಅದು ಬೇಗನೆ ಅವರಿಗೆ ಸಿಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಬೇರೆಯವರಿಗೆ ಅಲಾಟ್ ಮಾಡುವುದಕ್ಕೆ ಮುಂಚೆ, ಅಲ್ಲಿ ಬಡವಾಣೆಗಳು ಬೆಳೆಯುವುದಕ್ಕೆ ಮುಂಚೆ ಇವರು ಸಿವಿಕ್ ಅಮಿನಿಟೀಸ್ ಸೈಟ್ ಗಳನ್ನು ತೆಗೆದುಕೊಂಡರೆ ಇವರಿಗೆ ಸಹಾಯ ಆಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೂ ಒಂದು ವಿಷಯ. ತಮಿಳುನಾಡಿನಲ್ಲಿ ವರ್ಲ್ಡ್ ಬ್ಯಾಂಕ್‌ನವರ ಅಸಿಸ್ಟೇನ್ಸ್ ತೆಗೆದುಕೊಂಡು ಡಿಪೋಗಳನ್ನು ನಿರ್ಮಾಣ

ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದೇ ರೀತಿ ನಮ್ಮ ಸಾರಿಗೆ ಸಚಿವರು ಸಹ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ತೆಗೆದು ಕೊಂಡರೆ ನಮ್ಮ ಬೆಂಗಳೂರಿಗೆ ಎಷ್ಟು ಡಿಪೋಗಳು ಬೇಕೋ ಅಷ್ಟು ಕಟ್ಟುವುದಕ್ಕೆ ಬಹಳಷ್ಟು ಸುಲಭ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

SRI AZEEZ SAIT : All that my friend has suggested, we have done it. We have taken up this matter personally with BDA. Our officers are in touch with those officials and there is no question of difficulty in acquiring the lands for this purpose. As regards World Bank loan we are also at it and at the same time I would like to announce that we are seriously thinking of introducing battery-powered buses in the city and other cities of the State. Already we are in touch with BHEL. Recently, they have brought out 40 seater buses. That will help us in economy of fuel and it will also be anti - pollution. But that will take some time. I assure you that the services of the BTS will be improved day by day.

ಶ್ರೀ ಜಿ.ಎಸ್. ಆಚಾರ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಮುಂಚೆ ನನ್ನ ಪ್ರಶ್ನೆ ಇತ್ತು ತಾವು ಕರೆಯಲಿಲ್ಲ.

ಅಧ್ಯಕ್ಷರು : ನಾನು ಕರೆದೆ, ನೀವು ಎಲ್ಲಿ ಹೋಗಿದ್ದೀರಿ.

ಶ್ರೀ ಜಿ.ಎಸ್. ಆಚಾರ್ : ನಾನು ಇಲ್ಲಿಯೇ ಇದ್ದೆ. ತಾವು ಕರೆದದ್ದು ನನಗೂ ಗೊತ್ತಾಗಲಿಲ್ಲ.

ಶ್ರೀ ಹೆಚ್. ವಿಕಾಂತಯ್ಯ : ಅವರು ಮಾತುಕತೆಯಲ್ಲಿ ತೊಡಗಿದ್ದರು.

ಅಧ್ಯಕ್ಷರು : ನೀವೆಲ್ಲಾ ಸಾಕ್ಷಿ ಇದ್ದೀರಿ.

ಶ್ರೀ ಜಿ.ಎಸ್. ಆಚಾರ್ : ಈಗಾಲಾದರಾ ತಾವು ಆಲೋ ಮಾಡಬೇಕೆಂದು ನನ್ನ ಪ್ರಾರ್ಥನೆ.

MR. SPEAKER : Sorry, I have passed over to the next question. When the members are not attentive this is the price they have to pay.

ಚಿಕ್ಕನಾಯಕನಹಳ್ಳಿಗೆ ಆಸ್ಪತ್ರೆಯ ಸೌಲಭ್ಯಗಳು

492 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರಕ್ಕೆ ಸಾರ್ವಜನಿಕ ಆಸ್ಪತ್ರೆಯಾಗಲೀ, ಸಮುದಾಯ ಆರೋಗ್ಯ ಕೇಂದ್ರವಾಗಲಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಚಿಕ್ಕನಾಯಕನಹಳ್ಳಿ ಸಾರ್ವಜನಿಕ ಆಸ್ಪತ್ರೆ, ಕಾಮನ್ ಹೆಲ್ತ್ ಸೆಂಟರ್ ಅನ್ನು ಮಂಜೂರು ಮಾಡಲು ಸರ್ಕಾರದವರಿಗೆ ಇರುವ ತೊಂದರೆ ಏನು?

ಇ) ತಾಂತ್ರಿಕ ತೊಂದರೆಗಳು ಇಲ್ಲದೆ ಹೋದಲ್ಲಿ ಸರ್ಕಾರದವರು ಈ ಮಂಜೂರಾತಿಯನ್ನು ಯಾವಾಗ ನೀಡಲಿದ್ದಾರೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು)